ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 28/2010**

**ಫ್ರಾಸಾ- 24 ಚಾಸಾ- 32**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಆರ್ ಚಂದ್ರಶೇಖರ್ |
| ತಂದೆಯ ಹೆಸರುಃ | : | ಪಿ ರಾಜು |
| ವಯಸ್ಸುಃ | : | 50 ವರ್ಷ |
| ಉದ್ಯೋಗಃ | : | ಅಕೌಂಟೆಂಟ್ |
| ವಾಸ | : | ಶಿವಮೊಗ್ಗ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 28-04-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಬಿಕಾಂ ಪದವೀಧರನಾಗಿದ್ದು ಸಿಎ ಮುಗಿಸಿ ಲೆಕ್ಕಪತ್ರ ಪರಿಶೋಧಕನಾಗಿ ಕಳೆದ 20 ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದೇನೆ. ಶಿವಮೊಗ್ಗದ ರಾಜು ಏಜೆನ್ಸಿಯ ಲೆಕ್ಕಪತ್ರವನ್ನು ಕಳೆದ 20 ವರ್ಷಗಳಿಂದ ನಾನೇ ನೋಡಿಕೊಳ್ಳುತ್ತಿದ್ದೇನೆ.

2.2010ರಲ್ಲಿ ಸಿಒಡಿ ಪೊಲೀಸರು ಸಕಲೇಶಪುರದ ಎನ್ ಎಸ್ ಮೆಡಿಕಲ್ಸ್ ನವರು ರಾಜು ಏಜೆನ್ಸಿಯವರಿಗೆ ಔಷಧಿಗಳನ್ನು ಖರೀದಿ ಮಾಡಿದ ಬಗ್ಗೆ ಯಾವಾಗ ಚೆಕ್ ಅಥವಾ ಡಿಡಿ ನೀಡಿರುತ್ತಾರೆ ಎಂಬ ಮಾಹಿತಿಯನ್ನು ಕೇಳಿದ್ದರು. (ಈ ಹಂತದಲ್ಲಿ ಆರೋಪಿತರ ಪರ ವಕೀಲರು ಸಾಕ್ಷಿಯು ದಾಖಲೆಯನ್ನು ನೋಡಿ ಸಾಕ್ಷ್ಯ ನುಡಿಯುತ್ತಿದ್ದಾರೆಂದು ತಕರಾರು ಮಾಡಿರುತ್ತಾರೆ. ಸಾಕ್ಷಿಯನ್ನು ವಿಚಾರಿಸಿದಾಗ ಆ ದಾಖಲೆ ಇಲ್ಲದೆಕೂಡ ಸಾಕ್ಷ್ಯ ನುಡಿಯುತ್ತೇನೆಂದು ಹೇಳಿರುತ್ತಾರೆ) ರಾಜು ಏಜೆನ್ಸಿಯಲ್ಲಿ ನಿರ್ವಹಿಸಿದ್ದ ಲೆಡ್ಜರ್ ಎಕ್ಸ್ಟ್ರಾಕ್ಟ್

ಮತ್ತು ಅವರಿಗೆ ಸಂಬಂಧಿಸಿದ ಬ್ಯಾಂಕ್ ತಃಖ್ತೆಗಳನ್ನು ಪರಿಶೀಲಿಸಿ ನಾನು ಮಾಹಿತಿಯನ್ನು ನೀಡಿರುತ್ತೇನೆ. ಆ ದಾಖಲೆಯನ್ನು ಈಗ ನೋಡುತ್ತಿದ್ದು ನಿಪಿ-34 ಎಂದು ಗುರುತಿಸಲಾಯಿತು. ಮೂಲ ಚೆಕ್ ಮತ್ತು ಡಿಡಿ ಗಳನ್ನು ಬ್ಯಾಂಕಿಗೆ ಕಳುಹಿಸಿರುತ್ತೇವೆ. ಅದು ನಮ್ಮ ಬಳಿ ಇರುವುದಿಲ್ಲ.

**ಪಾಟೀಸವಾಲುಃ 1ನೇ ಆರೋಪಿ ಪರ ಶ್ರೀ ಎ ಹೆಚ್ ಬಿ ವಕೀಲರಿಂದಃ**

ನಿಪಿ-34ರಲ್ಲಿ ನನ್ನ ರುಜು ಇಲ್ಲ ಎಂದರೆ ನಿಜ. ನಾನು ರಾಜು ಏಜೆನ್ಸಿ ಅಲ್ಲದೆ ಬೇರೆ ಕಡೆ ಕೂಡ ಲೆಕ್ಕಪರಿಶೋಧಕನಾಗಿ ಕೆಲಸ ಮಾಡುತ್ತೇನೆ. ನಾನುಯಾವ ಕಂಪೆನಿಯ ಲೆಕ್ಕಪರಿಶೋಧನೆ ಮಾಡುತ್ತೇನೋ ಆ ಕಂಪೆನಿಯವರು ನೀಡಿದ ದಾಖಲೆಗಳ ಆಧಾರದಲ್ಲಿ ಲೆಕ್ಕ ಪರಿಶೋಧನೆ ಮಾಡುತ್ತೇನೆ. ನಾನು ಪರಿಶೀಲನೆ ಮಾಡಿದ್ದು ರಾಜು ಏಜೆನ್ಸಿಯವರಿಗೆ ಸೇರಿದ ಸೇಲ್ಸ್ ಇನ್ವಾಯ್ಸ್ ಮತ್ತು ಸೇಲ್ಸ್ ರಿಜಿಸ್ಟರ್. ನಾನು ಪರಿಶೀಲನೆ ಮಾಡಿದ್ದು ಮೂಲ ದಾಖಲೆಗಳನ್ನಲ್ಲ ಅದರ ಪ್ರತಿಗಳನ್ನು ಎಂದರೆ ಸರಿ. ರಾಜು ಏಜೆನ್ಸಿಯವರಿಗೆ ಸಂಬಂಧಿಸಿದ ಬ್ಯಾಂಕ್ ಸ್ಟೇಟ್ಮೆಂಟನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಯಾವ ಯಾವ ದಿನಾಂಕದಂದು ಎನ್ ಎಸ್ ಮೆಡಿಕಲ್ಸ್ ನವರಿಂದ ರಾಜು ಏಜೆನ್ಸಿಯವರಿಗೆ ಔಷಧಿ ಸರಬರಾಜು ಆಗಿ ಡಿಡಿ ಮತ್ತು ಚೆಕ್ ಬಂದಿತ್ತು ಎಂದು ನನಗೆ ಹೇಳಲಾಗುವುದಿಲ್ಲ. ರಾಜು ಏಜೆನ್ಸಿಯವರು ಬ್ಯೂಪ್ರಿಜೆಸಿಕ್ ಇಂಜೆಕ್ಷನ್ ನ್ನು ಯಾರು ಯಾರಿಗೆ ಯಾವಾಗ ಎಷ್ಟೆಷ್ಟು ಮಾರಾಟ ಮಾಡಿದ್ದಾರೆಂದು ನನಗೆ ಹೇಳಲಾಗುವುದಿಲ್ಲ. ನಾನು ರಾಜು ಏಜೆನ್ಸಿಯವರು ಮತ್ತು ಪೊಲೀಸರು ಕೇಳಿಕೊಂಡ ಮೇರೆಗೆ ನಿಪಿ-34ನ್ನು ನೀಡಿರುತ್ತೇನೆ ಎಂದರೆ ಸಾಕ್ಷಿಯು ಲೆಡ್ಜರ್ ಎಕ್ಸ್ಟ್ರಾಕ್ಟ್ ಮತ್ತು ಬ್ಯಾಂಕ್ ಸ್ಟೇಟ್ಮೆಂಟ್ ನೋಡಿ ನೀಡಿರುತ್ತೇನೆಎನ್ನುತ್ತಾರೆ. ನಿಪಿ-34ರ ಮಾಹಿತಿಗಳು ರಿಜಿಸ್ಟರ್ ನಲ್ಲಾಗಲೀ, ಇನ್ವಾಯ್ಸ್ ನಲ್ಲಾಗಲೀ ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಎನಏಸ್ ಮೆಡಿಕಲ್ಸ್ ನವರ ದಾಖಲಾತಿಗಳನ್ನು ಪರಿಶೀಲನೆಗಾಗಿ ನೀಡಿಲ್ಲ. ನಾನು ಪೊಲೀಸರ ಕೋರಿಕೆ ಮೇರೆಗೆ ಅವರು ತಮಗೆ ಬೇಕಾದ ದಾಖಲಾತಿಗಳನ್ನು ಕೇಳಿದ್ದರ ಮೇರೆಗೆ ನಿಪಿ-34ನ್ನು ನೀಡಿರುತ್ತೇನೆ ಹಾಗೂ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

**ಪಾಟೀಸವಾಲುಃ 2ನೇ ಆರೋಪಿತರ ಪರ ಶ್ರೀ ಜೆ ಎಸ್ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**